ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಈ ಸ್ಕೀಂ ಸ್ವಲ್ಪ ತಡವಾಗಿದ್ದಕ್ಕೆ ಬರೀ ಸರ್ಕಾರ ಅಷ್ಟೇ ಕಾರಣ ಅಲ್ಲ, ಬೆಂಗಳೂರು ನಾಗರೀಕರೂ ಕಾರಣರು ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ, ಇಲ್ಲಿ ಒಂದು ವಿಷಯವನ್ನು ತಮ್ಮ ನೆನಪಿಗೆ ತರುವುದಕ್ಕೆ ಇಷ್ಟಪಡುತ್ತೇನೆ. ಹೆಚ್ಚು ತೆರಿಗೆ ಇಲ್ಲದೆ ನೀರನ್ನು ಕೊಡಬೇಕು ಎನ್ನುವ ಕಾಲದಲ್ಲಿ, ವರ್ಲ್ಡ್ ಬ್ಯಾಂಕನವರು ತಮ್ಮ ಸಹಾಯವನ್ನು ಮಾಡುವುದಕ್ಕೆ ಸ್ವಲ್ಪ ಹಿಂದು ಮುಂದು ಮಾಡಿ ನಿಧಾನವಾಗಿದ್ದು ಇದೆ. ಮಾನ್ಯ ಸದಸ್ಯರು ಇದನ್ನು ಗಮನದಲ್ಲಿಟ್ಟುಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ಇವತ್ತಿನ ದಿವಸ ನಾವು ಏನು ವಾಟರ್ ರೇಟ್ ಹಾಕಿದ್ದೇವೆ ಅದು ಸರಿಯಾಗಿದೆ. ಇದು ಯಾವ ರೀತಿಯಾಗಿಯೂ ಜನರಿಗೆ ಬಹಳ ಭಾರವಾಗುವುದಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತೇನೆ.

Installation of a Caustic Soda Factory at Banaka village in Karwar

ಶ್ರೀಮತಿ ರಾಧಾಭಟ್ (ಅಂಕೋಲಾ).—

ಮಾನ್ಯ ಅಧ್ಯಕ್ಷರೇ, ನಾನು ಒಂದು ಮುಖ್ಯವಾದಂಥ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ಅದು ಏನೆಂದರೆ, ನಮ್ಮ ಕಾರವಾರ ಜಿಲ್ಲೆಯಲ್ಲಿ ಬಣಕ ಎಂಬ ಊರಲ್ಲಿ ಕಾಸ್ಟಿಕ್ ಸೋಡಾ ಫ್ಯಾಕ್ಟರಿಯನ್ನು ಹಾಕುತ್ತಿದ್ದಾರೆ. ಈ ಫ್ಯಾಕ್ಟರಿಯವರು ಸಾವಿರಾರು ಎಕರೆ ಭೂಮಿಯನ್ನು ರೈತರ ಕಡೆಯಿಂದ ವಶಪಡಿಸಿಕೊಂಡಿದ್ದಾರೆ. ಮತ್ತು ಅವರಿಗೆ ಯಾವ ಅನುಕೂಲವನ್ನು ಇದುವರೆಗೂ ಮಾಡಿಕೊಟ್ಟಿಲ್ಲ. ಅವರಿಗೆ ಪರಿಹಾರ ಧನವನ್ನೂ ಕೊಟ್ಟಿಲ್ಲ ; ಭೂಮಿಯನ್ನೂ ಕೊಟ್ಟಿಲ್ಲ. ನೂರಾರು ಮಂದಿ ರೈತರು ವಿಧಾನ ಸೌಧದ ಮುಂದೆ ಕುಳಿತುಕೊಂಡು ಅನಿರ್ದಿಷ್ಟ ಕಾಲದವರೆಗೆ ಮುಷ್ಕರ ಹೂಡಿದ್ದಾರೆ. ಇದರ ಬಗ್ಗೆ ಸರ್ಕಾರದವರು ಕೂಡಲೇ ಗಮನಹರಿಸಿ ಅವರಿಗೆ ಪರಿಹಾರಧನ ಮತ್ತು ಭೂಮಿಯನ್ನು ಒದಗಿಸಿಕೊಡಬೇಕು. ಇಲ್ಲದಿದ್ದರೆ, ಏನಾಗುತ್ತದೆಂದರೆ, ನಮ್ಮ ಊರಲ್ಲಿ ಸಣ್ಣ ಪುಟ್ಟ ಪುಡಾರಿಗಳಿಗೆ ಒಂದು ಅವಕಾಶವನ್ನು ಮಾಡಿಕೊಟ್ಟು ಅಪಪ್ರಚಾರಕ್ಕೆ ನಾವು ಒಳಗಾಗಬೇಕಾಗುತ್ತದೆ. ಉಂಡಾಡಿಗುಂಡರು, ತಿರುಗಾಡುತ್ತಾ ಇರುವವರ ಹೇಳಿಕೆಗೆ ಪ್ರಾಧಾನ್ಯತೆ ಕೊಟ್ಟಂತಾಗುತ್ತದೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಕೂಡಲೇ ಕಾರ್ಯಕ್ರಮ ಕೈಗೊಳ್ಳಬೇಕು. ರೈತರಿಗೆ ಅನ್ಯಾಯವಾಗದ ರೀತಿಯಲ್ಲಿ ಸಹಾಯ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರ ನೋಟೀಸನ್ನು ಸರ್ಕಾರದ ಕಡೆ ಕಳುಹಿಸಿದ್ದೇನೆ. ನಾಲೂಕರವರೆಗೆ ಗಂಟೆಗೆ ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಮಂತ್ರಿಗಳು ಬರೆದು ಕಳುಹಿಸಿದ್ದಾರೆ. ಅಲ್ಲಿಯ ಸಮಾಚಾರ ತರಿಸುವುದಕ್ಕೆ ಮಂತ್ರಿಗಳು ಕಾಗದವನ್ನೂ ಬರೆದಿದ್ದಾರೆ.

3-00 P.M.

Stappage of grants to Some Institutions of Phyrically Handicapped

Smt. DAMAYANTHI BORE GOWDA (Srirangapatna).—Madam, I want to bring to the notice of this august House the hardships faced by the institutions for the physically handicapped. They were receiving grants from the Social Welfare Department. In the year 1972-73 they were transferred to tho Education Department.

MADAM SPEAKER.—Has the hon. Member sent me notice ?

Smt. DAMAYANTHI BORE GOWDA.—No.

MADAM SPEAKER.—Please send me notice and I will pass it on to the Government.